## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನಪ್ರಶ್ನೆ ಸಂಖ್ಯೆ** | **2(48)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಪಿ. ಹೆಚ್ ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | **15-07-2024** |
| **ಉತ್ತರಿಸುವ ಸಚಿವರು** | **ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ದಾಖಲಾತಿ ವ್ಯವಸ್ಥೆ ಇದೆಯೇ; ಇದ್ದಲ್ಲಿ ಎಲ್ಲೆಲ್ಲಿ ಮತ್ತು ವಾಸ್ತವವಾಗಿ ಸಾರ್ವಜನಿಕರಿಗೆ ಉಪಯೋಗವಾಗಿರುವ ಅಂಕಿ ಅಂಶಗಳ ಮಾಹಿತಿ ನೀಡುವುದು. | ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ದಾಖಲಾತಿ ವ್ಯವಸ್ಥೆಯಿರುತ್ತದೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳ ಒಳ ರೋಗಿಗಳ ದಾಖಲಾತಿ ಮತ್ತು ಅಂಕಿ ಅಂಶಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಆಯುಷ್ ಇಲಾಖೆಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಹುದ್ದೆ ಮತ್ತು ಜವಾಬ್ದಾರಿಗಳನ್ನು ರೂಪಿಸದೇ ಹೆಚ್ಚುವರಿಯಾಗಿ ಸ್ನಾತಕೋತ್ತರ ಭತ್ಯೆ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ ಯಾವ ಮಾನದಂಡಗಳ ಆಧಾರದ ಮೇಲೆ ನೀಡಲಾಗಿದೆ ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?(ಮಾಹಿತಿ ಒದಗಿಸುವುದು) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರುಗಳಿಗೆ ನೀಡಿದ ಎಲ್ಲಾ ಸೌಲಭ್ಯ ಮತ್ತು ಸ್ಥಾನಮಾನಗಳನ್ನು ಆಯುಷ್ ವೈದ್ಯರಿಗೂ ವಿಸ್ತರಿಸುವ ಸಂಬಂಧ ಆಲೋಪತಿ/ದಂತ ವೈದ್ಯರುಗಳಿಗೆ ನೀಡಲಾಗುತ್ತಿರುವ ವೇತನ ಶ್ರೇಣಿ, ಭತ್ಯೆ ಹಾಗೂ ಸ್ಥಾನಮಾನಗಳನ್ನು ಆಯುಷ್ ವೈದ್ಯರುಗಳಿಗೂ ವಿಸ್ತರಿಸಲು ದಿನಾಂಕ:10-01-2013 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆಗೊಂಡಿರುವುದರಿಂದ ಮತ್ತು ಆಯುಷ್ ವೈದ್ಯರು ಮತ್ತು ಆಲೋಪತಿ ವೈದ್ಯರುಗಳು ಒಂದೇ ಅವಧಿಯ ಶೈಕ್ಷಣಿಕ ವ್ಯಾಸಂಗವನ್ನು ಮುಗಿಸಿರುವ, ಒಂದೇ ಕಾರ್ಯವಿಧಾನ ಹೊಂದಿರುವ, ಒಂದೇ ವೇತನ ಶ್ರೇಣಿ ಹೊಂದಿರುವ ಆಯುಷ್ ಹಾಗೂ ಆಲೋಪತಿ ವೈದ್ಯಾಧಿಕಾರಿಗಳ ಭತ್ಯೆಗಳಲ್ಲಿ ಉಂಟಾಗಿರುವ ತಾರತಮ್ಯವನ್ನು ಸರಿಪಡಿಸಿ ಆಲೋಪತಿ ವೈದ್ಯರುಗಳಿಗೆ ನಿಗದಿಪಡಿಸಿರುವ ವಿಶೇಷ ಭತ್ಯೆಯನ್ನು ಪದವಿ ವಿದ್ಯಾರ್ಹತೆ ಹೊಂದಿರುವ ಮತ್ತು ಸ್ನಾತಕೋತ್ತರ ಪದವಿ ಪಡೆದಿರುವ ಜಿಲ್ಲಾವಾರು ಆಯುಷ್ ವೈದ್ಯರುಗಳಿಗೆ **ಸರ್ಕಾರದ ಆದೇಶ ಸಂಖ್ಯೆ : ಆಕುಕ 358 ಪಿಐಎಂ 2016, ದಿನಾಂಕ:18-08-2016 ರಲ್ಲಿ** ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಿಗೆ ಆಲೋಪತಿ/ದಂತ ವೈದ್ಯರುಗಳಿಗೆ ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಆಕುಕ 20 ಹೆಚ್ಎಸ್ಎಚ್ 12, ದಿನಾಂಕ:18-12-2012 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಆಕುಕ 560 ಹೆಚ್ಎಸ್ಎಚ್ 14, ದಿನಾಂಕ:06-07-2015ರ ಆದೇಶಗಳಲ್ಲಿ ನೀಡಿರುವ ವೇತನ ಶ್ರೇಣಿ, ಭತ್ಯೆ ಸೌಲಭ್ಯ ಮತ್ತು ಸ್ಥಾನಮಾನಗಳನ್ನು ತತ್ಸಮಾನವಾಗಿ ಕಾಲಕಾಲಕ್ಕನುಗುಣವಾಗಿ ನೀಡಿರುವ ಸೌಲಭ್ಯವನ್ನು 2016-17ನೇ ಸಾಲಿನಿಂದ ದಿನಾಂಕ:01-04-2016ರಿಂದ ಜಾರಿಗೆ ಬರುವಂತೆ ಆಯುಷ್ ವೈದ್ಯಾಧಿಕಾರಿಗಳಿಗೆ ಈ ಕೆಳಗಿನಂತೆ ಸೇವಾ ಸೌಲಭ್ಯ ವಿಸ್ತರಿಸಲು ಆದೇಶಿಸಿದೆ (ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ). |

...2

| ಸೇವಾವಧಿ | ಬಿ.ಎ.ಎಂ.ಎಸ್./ ಬಿ.ಯು.ಎಂ.ಎಸ್/ ಬಿ.ಹೆಚ್.ಎಂ.ಎಸ್./ ಬಿ.ಎನ್.ವೈ.ಎಸ್. ವಿದ್ಯಾರ್ಹತೆ ಹೊಂದಿರುವವರಿಗೆ | ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರು-ವವರಿಗೆ |
|---|---|---|
| | ಮಾಸಿಕ ರೂ. | ಮಾಸಿಕ ರೂ. |
| 0-6 ವರ್ಷ ಸೇವೆ ಸಲ್ಲಿಸಿದವರಿಗೆ | 21,000 | 42,600 |
| 6-13 ವರ್ಷ ಸೇವೆ ಸಲ್ಲಿಸಿದವರಿಗೆ | 22,000 | 43,700 |
| 13-20 ವರ್ಷ ಸೇವೆ ಸಲ್ಲಿಸಿದವರಿಗೆ | 23,000 | 44,800 |
| 20 ವರ್ಷಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ | 23,000 | 44,800 |

ಒಟ್ಟು 158 ವೈದ್ಯಾಧಿಕಾರಿಗಳು (ಆಯುರ್ವೇದ - 127, ಯುನಾನಿ - 18, ಹೋಮಿಯೋಪಥಿ – 11, ಪ್ರ.ಚಿ.&ಯೋಗ - 02) ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಅದರಲ್ಲಿ 62 ವೈದ್ಯಾಧಿಕಾರಿಗಳು ತಾಂತ್ರಿಕ ಸೌಲಭ್ಯವುಳ್ಳ ಜಿಲ್ಲಾ ಆಸ್ಪತ್ರೆಗಳು, ಕಾಲೇಜು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತಾವು ಪಡೆದ ಪದವಿಯಲ್ಲಿನ ತಜ್ಞತೆಯನುಸಾರ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯವನ್ನು ನೀಡುತ್ತಿರುತ್ತಾರೆ.

ಉಳಿದ ಸ್ನಾತಕ ವೈದ್ಯಾಧಿಕಾರಿಗಳ ತಜ್ಞತೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಕ್ರಮವಹಿಸಲಾಗುವುದು.

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**ಆಕುಕ 174 ಪಿಟಿಡಿ 2024**

ಅನುಬಂಧ-1

## OPD-IPD Services available in Government AYUSH Hospitals/Teaching Hospitals in Karnataka

### Number of outpatient- inpatient attended during FY 2023-24

| Sl no | Name of the District | Name of the Taluk | Name of the Ayush Hospitals | System of Medicine | No. Of IPD Attedend | No. Of OPD Attedend |
|---|---|---|---|---|---|---|
| 1 | Bagalakote | Bagalkote | Govt. Ayurveda Hospital, Bagalkote | Ayurveda | 319 | 8029 |
| 2 | | Jamakhandi | Govt. Ayurveda Hospital, Jamakhandi | Ayurveda | 146 | 9540 |
| 3 | | Bilagi | Govt. Ayurveda Hospital, Beelagi | Ayurveda | 270 | 11217 |
| 4 | | Hungund | Govt. Ayurveda Hospital, Hungund | Ayurveda | 109 | 6607 |
| 5 | | Mudhol | Govt. Ayurveda Hospital, Mudhol | Ayurveda | 232 | 6477 |
| 6 | | Badami | Govt. Homoeopathy Hospital, Badami | Homoeopathy | 652 | 5243 |
| 7 | Ballary | Bellary | Govt. Ayurveda Medical College and Hospital, Bellary | Ayurveda | 3415 | 71509 |
| 8 | | Bellary | Govt. Ayurveda Hospital, Emmiganur | Ayurveda | 0 | 6277 |
| 9 | | Sanduru | Govt. Ayurveda Hospital, Sanduru | Ayurveda | 87 | 10751 |
| 10 | | Siraguppa | Govt. Ayurveda Hospital, Siraguppa | Ayurveda | 250 | 10915 |
| 11 | | Bellary | Govt. Unani Hospital, Bellary | Unani | 0 | 5340 |
| 12 | | Bellary | Govt. Ayurveda Medical College and Hospital, Bellary | Homoeopathy | 0 | 0 |
| 13 | | Bellary | Govt. Ayurveda Medical College and Hospital, Bellary | Nature Cure & Yoga | 0 | 0 |
| 14 | Belagavi | Soundatti | Govt. Ayurveda Hospital, Hooli | Ayurveda | 0 | 9117 |
| 15 | | Belagavi | Govt. Ayurveda Hospital, Belagavi | Ayurveda | 149 | 15472 |
| 16 | | Soundatti | Govt. Ayurveda Hospital, Soundatti | Ayurveda | 965 | 8369 |
| 17 | | Bailhongal | Govt. Ayurveda Hospital, Bylhongala | Ayurveda | 235 | 12222 |
| 18 | | Athani | Govt. Ayurveda Hospital, Athani | Ayurveda | 82 | 7574 |
| 19 | | Ramadurga | Govt. Ayurveda Hospital, Ramadurga | Ayurveda | 1177 | 13109 |
| 20 | | Raibhag | Govt. Homoeopathy Hospital, Raibhag | Homoeopathy | 675 | 7977 |
| 21 | Bengaluru Rural | Nelamangala | Govt. Ayurveda Hospital, Nelamangala | Ayurveda | 0 | 7932 |
| 22 | | Hosakote | Govt. Ayurveda Hospital, Hosakote | Ayurveda | 0 | 4383 |
| 23 | | Doddaballapura | Govt. Ayurveda Hospital, Doddaballapura | Ayurveda | 300 | 21957 |
| 24 | Bengaluru Urban | Bangalore (North) | Govt. Ayurveda Medical College and Hospital, Banglore (SJIIM) | Ayurveda | 6269 | 130544 |
| 25 | | Bangalore (North) | Govt. Ayurveda Hospital, Marenahlli | Ayurveda | 0 | 6252 |
| 26 | | Bangalore (East) | Govt. Ayurveda Hospital, Indiranagara CU Ayurveda | Ayurveda | 0 | 6110 |
| 27 | | Anekal | Govt. Ayurveda Hospital, Anekal | Ayurveda | 0 | 6633 |
| 28 | | Bangalore (North) | Govt. Ayurveda Medical College and Hospital, Bangalore (SJIIM) | Unani | 453 | 34528 |
| 29 | | Bangalore (North) | Govt. Unani Medical College and Hospital, Bengaluru | Unani | 1105 | 27415 |
| 30 | | Bangalore (North) | Govt. Homoeopathy Medical college and Hospital, Bengaluru | Homoeopathy | 1017 | 83838 |
| 31 | | Bangalore East | Govt. Homoeopathy Hospital, Indiranagar | Homoeopathy | 0 | 3262 |
| 32 | | Bangalore (North) | Govt. Ayurveda Medical College and Hospital, Bangalore | Nature Cure & Yoga | 5 | 8647 |
| 33 | Bidar | Bhalki | Govt. Ayurveda Hospital, Bhalki | Ayurveda | 0 | 5354 |
| 34 | | Bidar | Govt. Ayurveda Hospital, Bidar | Ayurveda | 0 | 16937 |
| 35 | | Basavakalyan | Govt. Ayurveda Hospital, Basavakalyan | Ayurveda | 0 | 20772 |
| 36 | | Bidar | Govt. Unani Hospital, Bidar | Unani | 0 | 3080 |
| 37 | Chamarajanagara | Kollegal | Govt. Ayurveda Hospital, Kollegal | Ayurveda | 0 | 3145 |
| 38 | | Gundlupet | Govt. Nature Cure & Yoga Hospital, Gundlupet | Nature Cure & Yoga | 0 | 12715 |
| 39 | | Chamarajanagar | Govt. Ayurveda Hospital, Chamarajanagar | Ayurveda | 216 | 18099 |
| 40 | | Gundlupet | Govt. Ayurveda Hospital, Gundlupet | Ayurveda | 220 | 24482 |
| 41 | Chikkaballapur | Gowribidanur | Govt. Unani Hospital, Gowribidanur | Unani | 193 | 4429 |
| 42 | | Chintamani | Govt. Ayurveda Hospital, Chintamani | Ayurveda | 367 | 12106 |
| 43 | | Srungeri | Govt. Ayurveda Hospital, Srungeri | Ayurveda | 0 | 1734 |
| 44 | | Kadur | Govt. Ayurveda Hospital, Kadur | Ayurveda | 138 | 14997 |
| 45 | | Mudigere | Govt. Ayurveda Hospital, Mudigere | Ayurveda | 118 | 10670 |
| 46 | | Tarikere | Govt. Ayurveda Hospital, Tarikere | Ayurveda | 165 | 6403 |
| 47 | Chitradurga | Hiriyur | Govt. Ayurveda Hospital, Imangala | Ayurveda | 0 | 6066 |
| 48 | | Hosadurga | Govt. Ayurveda Hospital, Doddathekalavatti | Ayurveda | 0 | 5712 |
| 49 | | Hiriyur | Govt. Ayurveda Hospital, Hiriyur | Ayurveda | 109 | 11171 |
| 50 | | Challakere | Govt. Ayurveda Hospital, Challakere | Ayurveda | 98 | 6222 |
| 51 | | Hosadurga | Govt. Ayurveda Hospital, Hosadurga | Ayurveda | 163 | 16651 |
| 52 | Dakshina Kannada | Mangalore | Govt. Ayurveda Hospital, Thokuru Jokatte | Ayurveda | 0 | 7844 |
| 53 | | Mangalore | Govt. Ayurveda Hospital, Ullala | Ayurveda | 0 | 9019 |
| 54 | | Mangalore | 50 Bedded Hospital Wenlock Hospital Mangalore | Ayurveda | 660 | 17941 |
| 55 | | Mangalore | 50 Bedded Hospital Wenlock Hospital Premises, CU Unani Mangalore | Unani | 163 | 8647 |
| 56 | | Mangalore | 50 Bedded Hospital Wenlock Hospital Premises.CU Homeopathy Mangalore | Homoeopathy | 0 | 3262 |
| 57 | | Mangalore | Govt. Ayurveda Hospital, Lalbagh, Mangalore | Ayurveda | 573 | 12906 |
| 58 | | Mangalore | Govt. Homoeopathy Hospital, Lalbhag Mangalore | Homoeopathy | 0 | 911 |
| 59 | Davanagere | Harihara | Govt. Ayurveda Hospital, Harihara | Ayurveda | 0 | 11701 |
| 60 | | Channagiri | Govt. Ayurveda Hospital, Channagiri | Ayurveda | 573 | 12906 |
| 61 | | Davangere | Govt. Nature Cure Hospital, Davangere | Nature Cure | 757 | 5933 |
| 62 | Dharwad | Dharwad | Govt. Ayurveda Hospital, Dharwad | Ayurveda | 299 | 7332 |
| 63 | | Navalgund | Govt. Ayurveda Hospital, Navalgund | Ayurveda | 0 | 4948 |
| 64 | | Kalaghattagi | Govt. Ayurveda Hospital, Kalaghattagi | Ayurveda | 476 | 6598 |
| 65 | Gadag | Mundaragi | Govt. Ayurveda Hospital, Mundargi | Ayurveda | 0 | 9498 |
| 66 | | Gadag | 50 Bedded Hospital Gadag | Ayurveda | 1800 | 9534 |
| 67 | | Gadag | 50 Bedded Hospital Gadag | Unani | 0 | 0 |
| 68 | | Gadag | 50 Bedded Hospital Gadag | Homoeopathy | 0 | 1872 |
| 69 | | Gadag | Govt. Ayurveda Hospital, Betageri-Gadag | Ayurveda | 240 | 7481 |
| 70 | | Ron | Govt. Ayurveda Hospital, Ron | Ayurveda | 265 | 10446 |
| 71 | | Nargund | Govt. Ayurveda Hospital, Nargund | Ayurveda | 0 | 6778 |
| 72 | Hassan | Hassan | Govt. Ayurveda Hospital, Kattaya | Ayurveda | 0 | 4750 |
| 73 | | Arasikere | Govt. Ayurveda Hospital, Belagumba | Ayurveda | 0 | 779 |
| 74 | | Aluru | Govt. Ayurveda Hospital, Aluru | Ayurveda | 0 | 1297 |
| 75 | | Hassan | Govt. Ayurveda Hospital, Hassan | Ayurveda | 334 | 16812 |
| 76 | | Arasikere | Govt. Ayurveda Hospital, Arasikere | Ayurveda | 69 | 6181 |
| 77 | | Holenarasipura | Govt. Ayurveda Hospital, Holenarasipura | Ayurveda | 294 | 7096 |

| | | | | | | |
|---|---|---|---|---|---|---|
| 162 | Vijayapura | Sindagi | Govt. Ayurveda Hospital, Sindagi | Ayurveda | 0 | 7992 |
| 163 | | Vijayapura | Govt. Unani Hospital, Combined Unit, Bijapur | Unani | 303 | 15423 |
| 164 | | Vijayapura | Govt. Homoeopathy Hospital, Combined Unit, Bijapur | Homoeopathy | 257 | 13245 |
| 165 | Yadgir | Shahapur | Govt. Ayurveda Hospital, Shahapur | Ayurveda | 3361 | 8658 |
| 166 | | Yadgir | Govt. Ayurveda Hospital, Yadgir | Ayurveda | 1287 | 3217 |
| 167 | | Shorapura | Govt. Unani Hospital, Thimmapura Rangampete | Unani | 293 | 5619 |
| 168 | | Yadgir | Govt. Unani Hospital, Yadgir | Unani | 1902 | 1902 |
| **TOTAL** | | | | | **54877** | **2048313** |

SNO HMIS Ayush
12/7/24
Directorate of Ayush

SNO HMIS-AYUSH
DIRECTORATE OF AYUSH
Dhanvanthari Road
Bangalore - 09.

3/15

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರುಗಳಿಗೆ ನೀಡಿದ ಎಲ್ಲಾ ಸೌಲಭ್ಯ ಮತ್ತು ಸ್ಥಾನಮಾನಗಳನ್ನು ಆಯುಷ್ ವೈದ್ಯರಿಗೂ ವಿಸ್ತರಿಸುವ ಬಗ್ಗೆ-ಆದೇಶ

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ ಆಕುಕ 718 ಹೆಚ್ಎಸ್ಹೆಚ್ 2008, ದಿನಾಂಕ. 10.12.2009.
2) ಸರ್ಕಾರಿ ಆದೇಶ ಸಂಖ್ಯೆ ಆಕುಕ 20 ಹೆಚ್ಎಸ್ಹೆಚ್ 12, ದಿನಾಂಕ. 18.12.2012
3) ಸರ್ಕಾರಿ ಆದೇಶ ಸಂಖ್ಯೆ ಆಕುಕ 357 ಪಿಐಎಂ 12, ದಿನಾಂಕ. 31.07.2013.
4) ಸರ್ಕಾರಿ ಆದೇಶ ಸಂಖ್ಯೆ ಆಕುಕ 560 ಹೆಚ್ಎಸ್ಹೆಚ್ 14, ದಿನಾಂಕ. 06.07.2015
5) ಆಯುಷ್ ನಿರ್ದೇಶಕರ ಪತ್ರ ಸಂಖ್ಯೆ ಆಯುಷ್/07/ಸಿಬ್ಬಂದಿ(4)/2014-15, ದಿನಾಂಕ:18-06-2016.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘವು ಸಲ್ಲಿಸಿದ ಬೇಡಿಕೆಗಳಿಗೆ ಅನುಗುಣವಾಗಿ ಪ್ರಮುಖ ಬೇಡಿಕೆಗಳನ್ನು ಒಳಗೊಂಡಂತೆ ಸಮಿತಿಯ ಶಿಫಾರಸ್ಸು ಮತ್ತು ಆರ್ಥಿಕ ಇಲಾಖೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ದಿನಾಂಕ. 25.09.2009 ರಂದು ನಡೆದ ಸಚಿವ ಸಂಪುಟದ ಅನುಮೋದನೆಯೊಂದಿಗೆ ಈ ಕೆಳಕಂಡ ಸವಲತ್ತುಗಳನ್ನು ಅಲೋಪತಿ/ದಂತ ವೈದ್ಯರುಗಳಿಗೆ ನೀಡಲಾಗಿದೆ.

1. ವೈದ್ಯರು ಗ್ರಾಮೀಣ ಪ್ರದೇಶದ ಕೇಂದ್ರಸ್ಥಾನದಲ್ಲಿ ವಾಸಿಸುವುದು ಕಡ್ಡಾಯವೆಂಬ ಷರತ್ತಿಗೆ ಒಳಪಟ್ಟು ಮಾಸಿಕ ರೂ.7,000/- (ಮಾಸಿಕ ಏಳು ಸಾವಿರಗಳು ಮಾತ್ರ) ಗ್ರಾಮೀಣ ಭತ್ಯೆ
2. ಡಿಪ್ಲೋಮಾ ಪಡೆದ ವೈದ್ಯರುಗಳಿಗೆ ಮಾಸಿಕ ರೂ.6,000/- (ಆರು ಸಾವಿರಗಳು ಮಾತ್ರ) ಹಾಗೂ ಸ್ನಾತಕೋತ್ತರ ಪದವಿ ಪಡೆದ ವೈದ್ಯರಿಗೆ ಮಾಸಿಕ ರೂ.8,000/-(ರೂಪಾಯಿ ಎಂಟು ಸಾವಿರಗಳು ಮಾತ್ರ) ರಂತೆ ಸ್ನಾತಕೋತ್ತರ ಭತ್ಯೆ.
3. ವಿವಿಧ ವೃಂದಗಳ ಎಲ್ಲಾ ವೈದ್ಯರಿಗೆ ಮಾಸಿಕ ರೂ.3,000/- (ರೂಪಾಯಿ ಮೂರು ಸಾವಿರಗಳು ಮಾತ್ರ) ರಂತೆ ತುರ್ತು ಚಿಕಿತ್ಸಾ ಭತ್ಯೆ
4. ಸೂಪರ್ ಸ್ಪೆಷಾಲಿಟಿ ಅರ್ಹತೆ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ರೂ.10,000/- ( ರೂಪಾಯಿ ಹತ್ತು ಸಾವಿರಗಳು ಮಾತ್ರ) ಸೂಪರ್ ಸ್ಪೆಷಾಲಿಟಿ ಭತ್ಯೆ
5. ಡಿಪ್ಲೋಮಾ ಅಥವಾ ಸ್ನಾತಕೋತ್ತರ ಪದವಿ ಪಡೆಯದೇ ಕನಿಷ್ಠ 6 ವರ್ಷಗಳ ಗ್ರಾಮೀಣ ಸೇವೆಯನ್ನು ಸಲ್ಲಿಸಿ, ಪ್ರಸ್ತುತ ನಗರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಮಾಸಿಕ ರೂ. 5,000/- ( ರೂಪಾಯಿ ಐದು ಸಾವಿರಗಳು ಮಾತ್ರ) ರಂತೆ ವಿಶೇಷ ಭತ್ಯೆ

2012–13 ನೇ ಸಾಲಿನಲ್ಲಿ ಆಲೋಪತಿ ವೈದ್ಯರುಗಳು ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಹಾಗೂ ಆಲೋಪತಿ ವೈದ್ಯರ ಸಂಘದ ಬೇಡಿಕೆಗಳಲ್ಲಿ ವೇತನ, ಭತ್ಯೆ ಮತ್ತು ಇತರ ಸೌಲಭ್ಯಗಳ ವಿಸ್ತರಣೆಯ ಅಂಶವನ್ನು ಸರ್ಕಾರವು ಕೂಲಂಕುಶವಾಗಿ ಪರಿಶೀಲಿಸಿ ಸೇವಾ ಸವಲತ್ತುಗಳನ್ನು ಆಲೋಪತಿ/ ದಂತ ವೈದ್ಯರುಗಳಿಗೆ ನೀಡಲು ಉಲ್ಲೇಖ (2) ಸರ್ಕಾರಿ ಆದೇಶದಲ್ಲಿ ಈ ಕೆಳಗಿನಂತೆ ಮಂಜೂರುಗೊಳಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಆಕುಕ 20 ಹೆಚ್ಎಸ್ಹೆಚ್ 2012, ದಿನಾಂಕ. 18.12.2012

| ಸೇವಾವಧಿ<br>2012–13 ನೇ ಸಾಲು | ಎಂ.ಬಿಬಿಎಸ್ ವಿದ್ಯಾರ್ಹತೆ (ಗ್ರಾಮೀಣ ಭತ್ಯೆ + ತುರ್ತು ಚಿಕಿತ್ಸಾ ಭತ್ಯೆ ಒಳಗೊಂಡಂತೆ) | ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ವಿದ್ಯಾರ್ಹತೆಗೆ ವಿಶೇಷ ಭತ್ಯೆ (ತುರ್ತು ಚಿಕಿತ್ಸಾ ಭತ್ಯೆ ಒಳಗೊಂಡಂತೆ) | ಸೂಪರ್ ಸ್ಪೆಷ್ಯಾಲಿಟಿ ಭತ್ಯೆ (ತುರ್ತು ಚಿಕಿತ್ಸಾ ಭತ್ಯೆ ಒಳಗೊಂಡಂತೆ) | ದಿನಾಂಕ. 10.12.2009 ಆದೇಶದಲ್ಲಿರುವ ಕ್ರಸಂ 5 ರಲ್ಲಿನ ವೈದ್ಯರುಗಳು (ತುರ್ತು ಚಿಕಿತ್ಸಾ ಭತ್ಯೆ ಒಳಗೊಂಡಂತೆ) |
|---|---|---|---|---|
| | ಮಾಸಿಕ ರೂ. | ಮಾಸಿಕ ರೂ. | ಮಾಸಿಕ ರೂ. | ಮಾಸಿಕ ರೂ. |
| 0–6 ವರುಷ ಸೇವೆ ಸಲ್ಲಿಸಿದವರಿಗೆ | 10000 ರಿಂದ 16000 | 11000 ರಿಂದ 17600 | 13000 ರಿಂದ 20800 | 8000 ರಿಂದ 16000 |
| 6–13 ವರುಷ ಸೇವೆ ಸಲ್ಲಿಸಿದವರಿಗೆ | 10000 ರಿಂದ 17000 | 11000 ರಿಂದ 18700 | 13000 ರಿಂದ 22100 | 8000 ರಿಂದ 18000 |
| 13 ಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ | 10000 ರಿಂದ 18000 | 11000 ರಿಂದ 19800 | 13000 ರಿಂದ 23400 | |

ಆಲೋಪತಿ ವೈದ್ಯರುಗಳಿಗೆ ನಿಗದಿ ಪಡಿಸಿರುವ ವೇತನ ಶ್ರೇಣಿ, ಭತ್ಯೆ ಸೌಲಭ್ಯಗಳು ಹಾಗೂ ಸ್ಥಾನಮಾನವನ್ನು ಆಯುಷ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರುಗಳಿಗೂ ವಿಸ್ತರಿಸುವ ಸಲುವಾಗಿ ಸಚಿವ ಸಂಪುಟದ ಅನುಮೋದನೆಯನ್ನು ಪ್ರಕರಣ ಸಂಖ್ಯೆ "ಸಿ–47 2013 ದಿನಾಂಕ. 10.01.2013 ರಲ್ಲಿ ಪಡೆಯಲಾಗಿದೆ " ಅದರಂತೆ ಸಚಿವ ಸಂಪುಟದ ನಿರ್ಣಯವನ್ನು ಉಲ್ಲೇಖ (3) ರ ಆದೇಶದಲ್ಲಿ ವಿಷಯವಾರು ವೈದ್ಯರು ದರ್ಜೆ–1 ಮತ್ತು ವೈದ್ಯರು ದರ್ಜೆ–2 ರ ಹುದ್ದೆಗಳನ್ನು ಕ್ರಮವಾಗಿ ಮೇಲ್ದರ್ಜೆಗೇರಿಸಿ ಹಿರಿಯ ವೈದ್ಯಾಧಿಕಾರಿ ಮತ್ತು ವೈದ್ಯಾಧಿಕಾರಿ ಎಂದು ಪದನಾಮಿಕರಿಸಿ ವೇತನ ಶ್ರೇಣಿಗಳನ್ನು ಹಾಗೂ ಸೇವಾ ಭತ್ಯೆಗಳನ್ನು ನಿಗಧಿಪಡಿಸುವುದರ ಮೂಲಕ ಅನುಷ್ಠಾನಗೊಳಿಸಲಾಗಿದೆ.

ಆಲೋಪತಿ ವೈದ್ಯರುಗಳು ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ 2012–13ನೇ ಸಾಲಿನಲ್ಲಿ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ ಆಕುಕ 20 ಹೆಚ್ಎಸ್ಹೆಚ್ 2012, ದಿನಾಂಕ. 18.12.2012 ರ ಆದೇಶವನ್ನು 2015–16 ನೇ ಸಾಲಿನಲ್ಲಿ ಮುಂದುವರಿಸಿ ಹೊರಡಿಸಿದ ಉಲ್ಲೇಖ (4) ರ ಸರ್ಕಾರಿ ಆದೇಶದಲ್ಲಿ ಈ ಕೆಳಗಿನ ಸವಲತ್ತುಗಳನ್ನು ಮಂಜೂರುಗೊಳಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಆಕುಕ 560 ಹೆಚ್ಎಸ್ಹೆಚ್ 2014, ದಿನಾಂಕ. 06.07.2015

| ಸೇವಾವಧಿ<br>2015–16 ನೇ ಸಾಲು | ಎಂ.ಬಿಬಿಎಸ್ / ಬಿಡಿಎಸ್ ವಿದ್ಯಾರ್ಹತೆ ಹೊಂದಿರುವವರಿಗೆ | ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ವಿದ್ಯಾರ್ಹತೆಗೆ ಹೊಂದಿರುವವರಿಗೆ | ಸೂಪರ್ ಸ್ಪೆಷ್ಯಾಲಿಟಿ ವಿದ್ಯಾರ್ಹತೆ ಹೊಂದಿರುವವರಿಗೆ |
|---|---|---|---|
| | ಮಾಸಿಕ ರೂ. | ಮಾಸಿಕ ರೂ. | ಮಾಸಿಕ ರೂ. |
| 0–6 ವರುಷ ಸೇವೆ ಸಲ್ಲಿಸಿದವರಿಗೆ | 16000 ರಿಂದ 21000 | 17600 ರಿಂದ 42600 | 20800 ರಿಂದ 50800 |
| 6–13 ವರುಷ ಸೇವೆ ಸಲ್ಲಿಸಿದವರಿಗೆ | 17000 ರಿಂದ 22000 | 18700 ರಿಂದ 43700 | 22100 ರಿಂದ 52100 |
| 13–20 ವರ್ಷ ಸೇವೆ ಸಲ್ಲಿಸಿದವರಿಗೆ | 18000 ರಿಂದ 23000 | 19800 ರಿಂದ 44300 | 23400 ರಿಂದ 58400 |
| 20 ವರ್ಷಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ | 18000 ರಿಂದ 23000 | 19800 ರಿಂದ 44800 | 23400 ರಿಂದ 58400 |

(4) 13

ನಿರ್ದೇಶಕರು, ಆಯುಷ್ ಇಲಾಖೆ ಇವರು ಉಲ್ಲೇಖ (5) ರ ತಮ್ಮ ಪ್ರಸ್ತಾವನೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಲೋಪತಿ/ ದಂತ ವೈದ್ಯರುಗಳಿಗೆ ಉಲ್ಲೇಖ (1), (2) ಮತ್ತು (3) ರ ಸರ್ಕಾರಿ ಆದೇಶಗಳಲ್ಲಿ ನೀಡಿರುವ ವೇತನ, ಭತ್ಯೆ ಮತ್ತು ಸ್ಥಾನಮಾನ ಸೌಲಭ್ಯಗಳನ್ನು ಆಯುಷ್ ಪದ್ಧತಿಯನ್ನು ಇತ್ತೀಚೆಗೆ ಜನಸಾಮಾನ್ಯರು ಅನುಸರಿಸಿ ಚಿಕಿತ್ಸೆ ಪಡೆಯುತ್ತಿರುವುದನ್ನು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಯುಷ್ ವೈದ್ಯರುಗಳು ಆಯುಷ್ ಪದ್ಧತಿಯಲ್ಲಿ ಜನ ಸಾಮಾನ್ಯರಿಗೆ ಚಿಕಿತ್ಸೆಯನ್ನು ನೀಡುತ್ತಿದ್ದು, ಸದರಿ ಚಿಕಿತ್ಸೆಯು ಸಮಾಜದ ಮುಖ್ಯವಾಹಿನಿಯ ಒಂದು ಭಾಗವಾಗಿರುವುದರಿಂದ ಆಯುಷ್ ವೈದ್ಯರುಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ಸೇವಾಸವಲತ್ತುಗಳನ್ನು ವಿಸ್ತರಿಸಿ ಆದೇಶ ಹೊರಡಿಸುವಂತೆ ಕೋರಿದ್ದಾರೆ.

| ಕ್ರಮ ಸಂಖ್ಯೆ | ವರ್ಷ | ಅಂದಾಜು ಹೆಚ್ಚುವರಿ ವೆಚ್ಚ (ಲಕ್ಷಗಳಲ್ಲಿ) |
|---|---|---|
| 1 | ಜನವರಿ 2013 ರಿಂದ ಜೂನ್ 2015 ರ ವರೆಗೆ (ಸರ್ಕಾರದ ಆದೇಶ ಆಕುಕ 20 ಹೆಚ್ಎಸ್ಹೆಚ್ 2013, ದಿನಾಂಕ 18.12.2012 ರ ದರದಲ್ಲಿ ) | 2496.12 |
| 2 | ಜುಲೈ 2015 ರಿಂದ ಮಾರ್ಚ್ 2016 ರ ವರೆಗೆ (ಸರ್ಕಾರದ ಆದೇಶ ಆಕುಕ 560 ಹೆಚ್ಎಸ್ಹೆಚ್ 2014, ದಿನಾಂಕ 06.07.2015 ರ ದರದಲ್ಲಿ ) | 1065.63 |
| 3 | 2016-17 ನೇ ಸಾಲಿಗೆ (ಸರ್ಕಾರದ ಆದೇಶ ಆಕುಕ 560 ಹೆಚ್ಎಸ್ಹೆಚ್ 2014, ದಿನಾಂಕ 06.07.2012 ರ ದರದಲ್ಲಿ ) | 1420.85 |
| | ಒಟ್ಟು | 4982.60 |

ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿದ್ದು, ಅಲೋಪತಿ/ದಂತ ವೈದ್ಯರುಗಳಿಗೆ ಉಲ್ಲೇಖ (1), (2) ಮತ್ತು (4)ರ ಸರ್ಕಾರಿ ಆದೇಶಗಳಲ್ಲಿ ನಿಗಧಿಪಡಿಸಿರುವ ಹೆಚ್ಚುವರಿ ವೇತನ ಭತ್ಯೆಗಳನ್ನು ಆಯುಷ್ ವೈದ್ಯಾಧಿಕಾರಿಗಳಿಗೆ ತತ್ಸಮಾನವಾಗಿ ಹಾಗೂ ಕಾಲಾಕಾಲಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಲೋಪತಿ/ದಂತ ವೈದ್ಯರುಗಳಿಗೆ ನೀಡಲಾಗುತ್ತಿರುವ ವೇತನ ಶ್ರೇಣಿ, ಭತ್ಯೆ ಹಾಗೂ ಸ್ಥಾನ ಮಾನಗಳನ್ನು ಆಯುಷ್ ವೈದ್ಯರುಗಳಿಗೆ ವಿಸ್ತರಿಸಲು ದಿನಾಂಕ 10.01.2013 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆಗೊಂಡಿರುವುದರಿಂದ ಮತ್ತು ಆಯುಷ್ ವೈದ್ಯರು ಮತ್ತು ಅಲೋಪತಿ ವೈದ್ಯರುಗಳು ಒಂದೇ ಅವಧಿಯ ಶೈಕ್ಷಣಿಕ ವ್ಯಾಸಂಗವನ್ನು ಮುಗಿಸಿರುವ, ಒಂದೇ ಕಾರ್ಯ ವಿಧಾನ ಹೊಂದಿರುವ, ಒಂದೇ ವೇತನ ಶ್ರೇಣಿಯನ್ನು ಹೊಂದಿರುವ ಆಯುಷ್ ಹಾಗೂ ಅಲೋಪತಿ ವೈದ್ಯಾಧಿಕಾರಿಗಳ ಭತ್ಯೆಗಳಲ್ಲಿ ಉಂಟಾಗಿರುವ ತಾರತಮ್ಯತೆಯನ್ನು ಸರಿಪಡಿಸಿ ಅಲೋಪತಿ ವೈದ್ಯರುಗಳಿಗೆ ನಿಗಧಿಪಡಿಸಿರುವ ವಿಶೇಷ ಭತ್ಯೆಯನ್ನು ಪದವಿ ವಿದ್ಯಾರ್ಹತೆ ಹೊಂದಿರುವ ಮತ್ತು ಸ್ನಾತಕೋತ್ತರ ಪದವಿ ಪಡೆದಿರುವ ಜಿಲ್ಲಾವಾರು ಆಯುಷ್ ವೈದ್ಯರುಗಳಿಗೆ 2016-17 ನೇ ಸಾಲಿನಿಂದ ಹೆಚ್ಚುವರಿಯಾಗಿ ಬಾಕಿ ವೇತನ ಪಾವತಿಯನ್ನು ಜಿಲ್ಲಾ ಪಂಚಾಯತ್‌ನ ಜಿಲ್ಲಾವಲಯದ ಮತ್ತು ರಾಜ್ಯ ವಲಯದ ಅನುದಾನದಲ್ಲಿ ಮಂಜೂರುಮಾಡಿ ಬಿಡುಗಡೆಗೊಳಿಸಲು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಆಪಕ 358 ಪಿಐಎಂ 2016 ಬೆಂಗಳೂರು, ದಿನಾಂಕ: 18-08-2016</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, 2013 ರ ಸಾಲಿನ ಸಚಿವ ಸಂಪುಟದ ನಿರ್ಣಯದಂತೆ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಿಗೆ ಅಲೋಪತಿ/ದಂತ ವೈದ್ಯರುಗಳಿಗೆ ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ ಆಕುಕ 20 ಹೆಚ್ಎಸ್ಎಚ್ 12, ದಿನಾಂಕ 18.12.2012 ಮತ್ತು ಸರ್ಕಾರಿ ಆದೇಶ ಸಂಖ್ಯೆ ಆಕುಕ 560 ಹೆಚ್ಎಸ್ಎಚ್ 14, ದಿನಾಂಕ 06.07.2015 ರ ಆದೇಶಗಳಲ್ಲಿ ನೀಡಿರುವ ವೇತನ ಶ್ರೇಣಿ, ಭತ್ಯೆ, ಸೌಲಭ್ಯ ಮತ್ತು ಸ್ಥಾನಮಾನಗಳನ್ನು ತತ್ಸಮಾನವಾಗಿ

ಕಾಲಕಾಲಾಕ್ಕನುಗುಣವಾಗಿ ನೀಡಿರುವ ಸೌಲಭ್ಯವನ್ನು 2016-17ನೇ ಸಾಲಿನಿಂದ ದಿನಾಂಕ.01.04.2016 ರಿಂದ ಜಾರಿಗೆ ಬರುವಂತೆ ಆಯುಷ್ ವೈದ್ಯಾಧಿಕಾರಿಗಳಿಗೆ ಈ ಕೆಳಗಿನಂತೆ ಸೇವಾ ಸೌಲಭ್ಯ ವಿಸ್ತರಿಸಲು ಆದೇಶಿಸಿದೆ.

| ಸೇವಾವಧಿ | ಬಿ.ಎ.ಎಂ.ಎಸ್/ಬಿ.ಯು.ಎಂ.ಎಸ್/ಬಿ.ಹೆಚ್.ಎಂ.ಎಸ್/ ಬಿ.ಎನ್.ವೈ.ಎಸ್ ವಿದ್ಯಾರ್ಹತೆ ಹೊಂದಿರುವವರಿಗೆ | ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವವರಿಗೆ |
|---|---|---|
| | ಮಾಸಿಕ ರೂ. | ಮಾಸಿಕ ರೂ. |
| 0-6 ವರ್ಷ ಸೇವೆ ಸಲ್ಲಿಸಿದವರಿಗೆ | 21,000 | 42,600 |
| 6-13 ವರ್ಷ ಸೇವೆ ಸಲ್ಲಿಸಿದವರಿಗೆ | 22,000 | 43,700 |
| 13-20 ವರ್ಷ ಸೇವೆ ಸಲ್ಲಿಸಿದವರಿಗೆ | 23,000 | 44,800 |
| 20 ವರ್ಷಕ್ಕಿಂತ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ | 23,000 | 44,800 |

ಮೇಲಿನ ಬಾಬ್ತನ್ನು ಜಿಲ್ಲಾ ಪಂಚಾಯತ್‌ನ ಜಿಲ್ಲಾ ವಲಯದ ಹಾಗೂ ರಾಜ್ಯ ವಲಯದ ಅನುದಾನದಲ್ಲಿ ಭರಿಸತಕ್ಕದ್ದು.

ಹೆಚ್ಚಿನ ಅನುದಾನದ ಅವಶ್ಯವಿದ್ದಲ್ಲಿ 2016-17 ನೇ ಸಾಲಿನ ಪೂರಕ ಅಂದಾಜು ಪಟ್ಟಿಯೊಂದಿಗೆ ಆಯಾಯ ಜಿಲ್ಲಾ ಪಂಚಾಯತ್‌ನ ಜಿಲ್ಲಾ ವಲಯದಲ್ಲಿ ಮತ್ತು ರಾಜ್ಯವಲಯದಲ್ಲಿ ಅನುದಾನ ಒದಗಿಸಿಕೊಳ್ಳುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸಚಿವ ಸಂಪುಟದ ವಿಷಯ ಸಂಖ್ಯೆ:ಸಿ47/2013, ದಿನಾಂಕ:10-01-2013ರಲ್ಲಿ ಪಡೆದ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಮುದ್ರಿತ 100 ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಲು ಕೋರಿದೆ.

ಪ್ರತಿ

1. ಪ್ರಧಾನ ಮಹಾಲೇಖಪಾಲರು (G & S.S.A) & E & RSE), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
3. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತ್ರಿ ರಸ್ತೆ, ಬೆಂಗಳೂರು.

(5) 11

4. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್
5. ಎಲ್ಲಾ ಜಿಲ್ಲಾ ಆಯುಷ್ ಅಧಿಕಾರಿಗಳು,
6. ಅಧ್ಯಕ್ಷರು, ಕರ್ನಾಟಕ ರಾಜ್ಯ ಆಯುಷ್ ವೈದ್ಯಾಧಿಕಾರಿಗಳ ಸಂಘ(ರಿ),ಬೆಂಗಳೂರು

} ನಿರ್ದೇಶಕರು, ಆಯುಷ್‌ರವರ ಮೂಲಕ

7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆಕುಕ ಇಲಾಖೆ
8. ಸರ್ಕಾರದ ಉಪ ಕಾರ್ಯದರ್ಶಿ-3ರವರ ಆಪ್ತ ಸಹಾಯಕರು, ಆಕುಕ ಇಲಾಖೆ
9. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.